ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮಂತ್ರಿಗಳು)

ಅ) ಬಂದಿದೆ.

ಆ) ೮೫.೦೦ ಲಕ್ಷ ರೂಪಾಯಿಗಳು.

ಇ) ಮಾರ್ಚ್ ೮೫ರ ವರೆಗೆ ಜೀವವಿಮಾ ನಿಗಮದಿಂದ ೨೮.೦೦ ಲಕ್ಷ ರೂಗಳು ಬಂದಿರುತ್ತದೆ. ೮೫-೮೪ರ ಸಾಲಿಗೆ ಜೀವವಿಮಾನಿಗಮವು ಈವರೆಗೆ ಯಾವುದೇ ಮೊತ್ತವನ್ನು ಕೊಟ್ಟಿರುವುದಿಲ್ಲ.

ಈ) ೮೪ರ ಜನವರಿ ಅಂತ್ಯದವರೆಗೆ ೯,೫೦೦.೦೦ ರೂಗಳನ್ನು ವಿಚ್ರ್ಚು ಮಾಡಲಾಗಿದೆ.

ಉ) ವಿವಿಧ ಕೆಲಸಗಳಿಗೆ ಗುತ್ತಿಗೆದಾರರನ್ನು ನೇಮಿಸಲಾಗುತ್ತಿದೆ ಮತ್ತು ಈ ಯೋಜನೆಗೆ ಬೇಕಾದ ಸಾಮಗ್ರಿಗಳನ್ನು ಖರೀದಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಊ) ಈ ಯೋಜನೆಯನ್ನು ೧೯೮೫-೮೬ ಅಂತ್ಯದಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಶ್ರೀ ಕೆ. ಬಿ. ಶಾನಪ್ಪ —ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಯವರು ಮೊನ್ನೆ ತಿನೇ ತಾರೀಖು ಅಡಿಪಾಯ ಹಾಕಿದ್ದಾರೆ. ೧೯೮೫ರಲ್ಲಿ ೨೮ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇದರ ಮೇಲೆ ಬೀಳುವ ಬಡ್ಡಿಯನ್ನು ಮುನಿಸಿಪಾಲಿಟಿ ಮೇಲೆ ಹಾಕಿದ್ದೀರಾ ಎಂದು ಮಾನ್ಯ ಮಂತ್ರಿಯವರನ್ನಿ ಕೇಳಬಯಸುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ಸ್ವಾಮಿ, ನನ್ನಲ್ಲಿ ಯಾವುದೇ ಮಾಹಿತಿ ಇಲ್ಲ. ಹಣ ಬಂದಮೇಲೆ ಟೆಂಡರ್ ಕರೆಯಬೇಕೂ, ಇನ್ನಿತರ ವ್ಯವಸ್ಥೆ ಮಾಡಬೇಕು. ಕಾಮಗಾರಿ ಕೆಲಸ ಪ್ರಾರಂಭ ಮಾಡುವುದು ವಿಳಂಬವಾಗಿದೆ.

ಶ್ರೀ ಕೆ. ಬಿ. ಶಾನಪ್ಪ.—ಎಲ್.ಐ.ಸಿ. ಯಿಂದ ಬಂದಂಥ ಹಣವನ್ನು ಬಿಡುಗಡೆ ಮಾಡುತ್ತೀರಾ? ಕೆಲಸ ಏನು ಪ್ರಾರಂಭವಾಗಿದೆ ಅದನ್ನು ಮುಂದುವರೆಸಿಕೊಂಡು ಹೋಗುತ್ತೀರಾ ?

ಶ್ರೀ ಎಂ. ಚಂದ್ರಶೇಖರ್.—ಕೆಲಸ ಪ್ರಾರಂಭವಾಗಿದೆ, ಈಗಾಗಲೇ ರಾಜ್ಯಸರ್ಕಾರ ೮ ಲಕ್ಷ ರೂಪಾಯಿಂಗಳನ್ನು ಬಿಡುಗಡೆ ಮಾಡಿದೆ. ಕೆಲಸ ನಡೆಯುತ್ತಿದ್ದರೆ ಅವರೇ ಕೊಡುತ್ತಾರೆ.

ಬಾರಿ ಮಳೆಯಿಂದ ಬೆಳೆಗಳ ನಾಶ

೧೪೭೭ ಶ್ರೀ ಎಸ್. ನಂಜಪ್ಪ (ಕೃಷ್ಣರಾಜಸಾಗರ) ಮಾನ್ಯ ಕಂದಾಯ ಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಕಳೆದ ೧೯೮೫ನೇ ಡಿಸೆಂಬರ್ ತಿಂಗಳಲ್ಲಿ ಪದಿಮೂರು ದಿವಸಗಳವರೆಗೂ ಅಕಾಲಿಕ ಮಳೆಯಿಂದಾಗಿ ಒಕ್ಕಣೆಯಾಗಿ ಅರಿಯಾಗಿ ಬಿದ್ದಿದ್ದ ಭತ್ತದ ಬೆಳೆ ಒಕ್ಕಣೆ ಮಾಡಿ ಕಣದಲ್ಲಿ ರಾಶಿ ಬಿದ್ದ ಭತ್ತ ಮಳೆಯಲ್ಲಿ ತೊಯ್ದು ಮೊಳಕೆ ಬಂದು ದನ ಮೇಯುವ ಭತ್ತದ ಹುಲ್ಲು ಕೊಳೆತು ರೈತರಿಗೆ ಲಕ್ಷಾಂತರ ರೂಪಾಯಿ ನಷ್ಟವಾಗಿರುವುದು ಸರಕಾರದವರ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ ಸರಕಾರದವರು ನಷ್ಟವನ್ನು ಅನುಭವಿಸಿರುವ ರೈತರಿಗೆ ಪರಿಹಾರವನ್ನು ನೀಡುವರೆ ?

ಶ್ರೀ ವಿ. ಎಲ್. ಪಾಟೀಲ್ (ಕಂದಾಯ ಮಂತ್ರಿಗಳು)

ಅ) ೧೯೮೫ನೇ ಡಿಸೆಂಬರ್ ಮಾಹೆಯಲ್ಲಿ ರಾಜ್ಯದಲ್ಲಿ ಬಿದ್ದ ಅಕಾಲಿಕ ಮಳೆಯಿಂದ ಭತ್ತದ ಗುಣ ಮಟ್ಟದಲ್ಲಿ ಅಲ್ಲಲ್ಲಿ ನಷ್ಟವಾಗಿದ್ದು ಭತ್ತದ ಹುಲ್ಲಿಗೆ ಸ್ವಲ್ಪ ಅಧಿಕ ಪ್ರಮಾಣದಲ್ಲಿ ನಷ್ಟವಾಗಿದೆ.

ಆ) ರೈತರಿಗೆ ಇಂತಹ ಸಂದರ್ಭದಲ್ಲಿ ಪರಿಹಾರ ನೀಡಲು ಅವಕಾಶವಿಲ್ಲ.

ಶ್ರೀ ಎಸ್. ನಂಜಪ್ಪ.—ಕೆ. ಆರ್. ನಗರ ತಾಲ್ಲೂಕಿನಲ್ಲಿ ರೈತರು ಹೆಚ್ಚಿಗೆ ಭತ್ತವನ್ನು ಬೆಳೆಯುತ್ತಾರೆ. ಅಕಾಲದಲ್ಲಿ ಮಳೆ ಬಂದಿದ್ದರಿಂದ ಭತ್ತದ ಬೆಳೆಗೆ ತುಂಬಾ ಹಾನಿಯಾಗಿದೆ. ಭತ್ತದ ಬೆಳೆ ಮಳೆಯಲ್ಲಿ ತೋಯ್ದು ಮೊಳಕೆ ಬಂದು ಭಾರಿ ನಷ್ಟವುಂಟಾಗಿದೆ ಈ ಸಂದರ್ಭದಲ್ಲಿ ಕಂದಾಯ ಇಲಾಖೆಯವರು ಕಂದಾಯ ವಸೂಲು ಮಾಡುತ್ತಿದ್ದಾರೆ. ಸಹಕಾರಿ ಸಂಘಗಳವರು ಸಾಲ ವಸೂಲು ಮಾಡುವುದಕ್ಕೆ ಬರುತ್ತಿರುವುದರಿಂದ ರೈತರಿಗೆ ತುಂಬಾ ತೊಂದರೆಯಾಗಿದೆ. ಕಂದಾಯ ಮತ್ತು ಸಾಲ

ವಸೂಲಿ ಕ್ರಮವನ್ನು ಮುಂದೂಡಿ, ಹುಲ್ಲು ನಷ್ಟವಾಗಿರುವುದನ್ನು ತಾವೇ ಒಪ್ಪಿಕೊಂಡಿದ್ದೀರಿ, ಮೇವನ್ನು ಒದಗಿಸಿಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ವಿ. ಎಲ್. ಪಾಟೀಲ್.—ಕಾನೂನು ಪ್ರಕಾರ ಸಾಧ್ಯವಿದ್ದರೆ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ದೊಡ್ಡಬೋರೇಗೌಡ.—ಸ್ವಾಮಿ, ಡಿಸೆಂಬರ್ ತಿಂಗಳಲ್ಲಿ ಬಿದ್ದ ಆಕಾಲಿಕ ಮಳೆಯಿಂದ ವ್ಯವಸಾಯಗಾರರು ಕಷ್ಟಕಾರ್ಪಣ್ಯಕ್ಕೆ ಗುರಿಯಾಗಿದ್ದಾರೆ. ಸರ್ಕಾರ ನಷ್ಟವಾಗಿರುವುದನ್ನು ಅಂದಾಜು ಮಾಡಿಸಿ, ದುಃಖದುಮ್ಮಾನದಲ್ಲಿರತಕ್ಕವರಿಗೆ ಪರಿಹಾರ ಕೊಡುತ್ತೀರಾ ?

ಶ್ರೀ ವಿ. ಎಲ್. ಪಾಟೀಲ್.—ಇಂಥ ಪ್ರಸಂಗಗಳಲ್ಲಿ ಬಿತ್ತನೆ ಬೀಜ, ಮಂತ್ರಿತರ ಸಲಕರಣೆಗಳನ್ನು ಒದಗಿಸಿಕೊಡುವುದಕ್ಕೆ ವ್ಯವಸ್ಥೆ ಮಾಡಲಾಗುವುದು.

ಶ್ರೀ ಎಸ್. ಸೂರ್ಯನಾರಾಯಣ ರಾವ್.—ಸ್ವಾಮಿ, ಎಲ್ಲಾ ಕಡೆ ಮಳೆಯಾಗಿದ್ದು ರೈತರು ನಷ್ಟ ಅನುಭವಿಸಿದ್ದಾರೆ. ಇದರ ಬಗ್ಗೆ ಸಮೀಕ್ಷೆ ನಡೆಸುವುದಕ್ಕೆ ಸರ್ಕಾರ ಏರ್ಪಾಡು ಮಾಡುತ್ತದೆಯೇ ?

ಶ್ರೀ ವಿ. ಎಲ್. ಪಾಟೀಲ್.—ಯಾವ ಯಾವ ಭಾಗದಲ್ಲಿ ಮಳೆ ಬಿದ್ದು ತೊಂದರೆಯಾಗಿದೆ ಅಲ್ಲಿ ಪರಿಹಾರ ಕೊಡಲಿಕ್ಕೆ ಪ್ರಯತ್ನ ಮಾಡಿದ್ದೇವೆ.

ಗೈರುಹಾಜರಿ ಸದಸ್ಯರು.

ಯಲ್ಲಮ್ಮ ದೇವಸ್ಥಾನದ ಮಂಡಲಿಗೆ ಜಮಾ ಮಾಡಲಾದ ಹಣ

೧೨೧೩. ಶ್ರೀ ಆರ್. ಪಿ. ಪಾಟೀಲ್ (ಪರಸಗಡ) ಮಾನ್ಯ ಕಂದಾಯ ಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ದರ್ಶನ ಶುಲ್ಕ, ವಿಶೇಷ ದರ್ಶನ ಶುಲ್ಕ, ತೆಂಗಿನಕಾಯಿ ಒಡೆಯುವ ಬಗ್ಗೆ ವಸೂಲಿ ಮಾಡುತ್ತಿರುವ ಹಣ, ಶಿಬಿರಕ್ಕೆ (ಶಿಖರದ ಸಮೇತ್ತಲೂ) ಕರ್ಪೂರ ಹಚ್ಚಲು ವಸೂಲು ಮಾಡುತ್ತಿರುವ ಹಣ, ಹುಂಡಿಯ ಹಣ ಮತ್ತು ಸಾರ್ವಜನಿಕರು ಮನಿಯಾರ್ಡರ್ ಮೂಲಕ ದೇವರಿಗೆ ಅಭಿಷೇಕ ಮಾಡಿಸುವ ಹಣ ಕಳಿಸುವ ಕಾಣಿಕೆ, ಟ್ರಸ್ಟ್ ಆಫೀಸಿನಲ್ಲಿ ಪಾವತಿ ಮೂಲಕ ಬಂದ ಹಣ, ಬಂಗಾರ, ಬೆಳ್ಳಿ, ಸೀರೆ ಮತ್ತು ದೇವಸ್ಥಾನದ ಜಾಗಾ ಹಾಗೂ ಖೋಲಿಗಳಿಂದ ಬರುವ ಬಾಡಿಗೆ ಹಣ, ವೇಲ್ಯಾಣಿಸಿದ ಪ್ರತಿಯೊಂದು ಬಾಬಿನಿಂದ ಸವದತ್ತಿ ಯಲ್ಲಮ್ಮ ದೇವಸ್ಥಾನದ ಟ್ರಸ್ಟಿಗೆ ೧೯೮೦ ರಿಂದ ೩೧-೩-೧೯೮೩ರವರೆಗೆ ಪ್ರತಿವರ್ಷ ಎಷ್ಟು ಹಣ ಜಮಾ ಆಗಿದೆ ?

ಆ) ಶ್ರೀ ಯಲ್ಲಮ್ಮಾ ದೇವಸ್ಥಾನದ ಟ್ರಸ್ಟಿನವರು ಯಾತ್ರಿಕರ ಅನುಕೂಲತೆಗಾಗಿ ಸನ್ ೧೯೮೦ ರಿಂದ ೧೯೮೩ರವರೆಗೆ ಏನು ಸೌಲಭ್ಯ ಮಾಡಿದ್ದಾರೆ ಹಾಗೂ ಪ್ರತಿ ವರ್ಷ ಯಾವ ಯಾವ ಕೆಲಸಕ್ಕೆ ಎಷ್ಟು ಹಣ ಖರ್ಚು ಮಾಡಿದ್ದಾರೆ ?

ಇ) ಯಾತ್ರಿಕರಿಂದ ವಸೂಲಿ ಮಾಡಿದ ಹಣ ಖರ್ಚು ಮಾಡದೇ ಇದ್ದಲ್ಲಿ ಯಾತ್ರಿಕರಿಂದ ಹಣ ವಸೂಲಿ ಮಾಡಲು ಕಾರಣಗಳೇನು ?

ಶ್ರೀ ವಿ. ಎಲ್. ಪಾಟೀಲ್ (ಕಂದಾಯ ಮಂತ್ರಿಗಳು).—

ಅ) ಪಟ್ಟಿಯನ್ನು ಲಗತ್ತಿಸಿದೆ.

ಆ) ೧೯೮೦ ರಿಂದ ೮೨ರ ಅವಧಿಯಲ್ಲಿ ದೇವಸ್ಥಾನದ ಟ್ರಸ್ಟಿನವರು ಯಾತ್ರಿಕರ ಅನುಕೂಲತೆಗಾಗಿ ಸೌಲಭ್ಯ ಒದಗಿಸಲು ಯಾವ ಕಾರ್ಯಗಳನ್ನು ತೆಗೆದುಕೊಂಡಿಲ್ಲ. ೧೯೮೩ರಲ್ಲಿ ಯಾತ್ರಿಕರಿಗೆ ಕುಡಿಯುವ ನೀರನ್ನು ಒದಗಿಸುವ ಕೆಲಸ ತೆಗೆದುಕೊಳ್ಳಲು ತೀರ್ಮಾನಿಸಿ ಸು.೭೦ ಲಕ್ಷ ರೂಪಾಯಿಗಳನ್ನು ಕರ್ನಾಟಕ ನಗರ ನೀರು ಸರಬರಾಜು ಮಂಡಳಿಗೆ ಜಮಾ ಮಾಡಿದೆ. ಈ ಅವಧಿಯಲ್ಲಿ ಬೇರೆ ಯಾವ ಕೆಲಸ ತೆಗೆದುಕೊಂಡಿಲ್ಲ ಮತ್ತು ಖರ್ಚು ಮಾಡಿಲ್ಲ.

ಇ) ಟ್ರಸ್ಟ್ ಕಮಿಟಿಯು ಯಾತ್ರಿಕರ ಸೌಲಭ್ಯ ಒದಗಿಸಲು ಈಗಾಗಲೇ ೨೧೧ ಕೊಠಡಿಗಳುಳ್ಳ ಒಂದು ಛತ್ರ ಮತ್ತು ಒಂದು ಕಲ್ಯಾಣ ಮಂಟಪ ಕಟ್ಟಲು ತೀರ್ಮಾನಿಸಿ, ಕಲ್ಯಾಣ ಮಂಟಪದ ನಕಾಶೆ ತಯಾರಿಸಿ, ದಿನಾಂಕ ೧-೧೦-೧೯೮೩ರ ಸಭೆಯಲ್ಲಿ ಇದನ್ನು ಅನುಮೋದಿಸಿದೆ. ಮುಂದಿನ ಕ್ರಮ ತೆಗೆದುಕೊಳ್ಳಲಾಗುತ್ತಿದೆ.